Doc-496
T-P-2

Reg No B G 155 17 — 6 —72

55th Year of Publication ‘Satyavadi’ daily, Mysore 4

In the State - The First
Golden Jubilee Celebrated Paper
★
News, Views, Dharmic Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅಕಮುನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಶಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ವಾರಣಾಸಿಯಲ್ಲಿ ಗೋಳೀಬಾರ್‌ನಿಂದ ಒಂದು ಮರಣ

ಉದ್ಯೋಗಾರ್ಥಿಗಳು

1971 ರ ಡಿಸೆಂಬರ್ 31 ರ ವರೆಗೆ ಉದ್ಯೋಗ ವಿನಿಮಯ ಕಚೇರಿಗಳ ರಿಜಿಸ್ಟರುಗಳಲ್ಲಿ ಹೆಸರು ದಾಖಲು ಮಾಡಿಸಿದ ಉದ್ಯೋಗಾರ್ಥಿಗಳ ಸಂಖ್ಯೆ 2245564 ರಷ್ಟಿತ್ತು.

★

ಗಂಧದ ಮರದ ವಶ

ತಿರುವಳ್ಳೂರು ತಾಲ್ಲೂಕು ಪುಗ್ಗಲ್ಲಿಯಲ್ಲಿ ಅಕ್ರಮ ಸಾಗಾಣಿಕೆ ಆಗುತ್ತಿದ್ದ 7 ಸಾವಿರ ರೂ ಬೆಲೆಯ ಗಂಧದ ಮರ ವಶಪಡಿಸಿಕೊಳ್ಳಲಾಯಿತು. ಅದನ್ನು ಸಾಗಾಣಿಕೆ ಮಾಡುತ್ತಿದ್ದ 2 ಲಾರಿಗಳನ್ನು ವಶಪಡಿಸಿಕೊಳ್ಳಲಾಯಿತು ಆರು ಮಂದಿ ಬಂಧಿತರಾದರು

★

ಕೃಷ್ಣರವರ ಭರವಸೆ

ನಿರುದ್ಯೋಗ ಪರಿಹಾರಕ್ಕೆ ಶ್ರೀರಂಗಪಟ್ಟಣದಲ್ಲಿ ಒಂದು ಕೈಗಾರಿಕೆ ಸ್ಥಾಪಿಸುವದಾಗಿ ಕೈಗಾರಿಕೆ ಮಂತ್ರಿ ಶ್ರೀ ಎಸ್ ಎಂ ಕೃಷ್ಣರವರು ಶ್ರೀರಂಗಪಟ್ಟಣದಲ್ಲಿ ತಿಳಿಸಿದರು.

★

ಭಾರತ ದಾದಿಯರು

ಜಾಂಬಿಯಾಕ್ಕೆ ಭಾರತ ದಾದಿಯರ 3 ಜನರ ತಂಡ ತಲುಪಿದೆ.

★

ಕಾಫಿ ಪ್ರಾಜೆಕ್ಟುಗಳು

ನಲವತ್ತು ಲಕ್ಷ ರೂಪಾಯಿಗಳ ವೆಚ್ಚದ ನಾಲ್ಕು ಕಾಫಿ ಪ್ರಾಜೆಕ್ಟುಗಳನ್ನು ಮೈಸೂರು, ತಮಿಳುನಾಡು ಹಾಗೂ ಕೇರಳಗಳಲ್ಲಿ ಸ್ಥಾಪಿಸಲಾಗುವುದೆಂದು ಮದ್ರಾಸಿನಿಂದ ವಾರ್ತೆ ಬಂದಿದೆ. ಕೇಂದ್ರ ವಿದೇಶ ವ್ಯಾಪಾರ ಉಪ ಮಂತ್ರಿ ಶ್ರೀ ಜಾರ್ಜ್ ಥಾಪರು ಈ ವಿಚಾರ ತಿಳಿಸಿದರು

ಪ್ರತಿಭಟನಾ ದಿನ

ಲಕ್ನೋದಿಂದ ಬಂದಿರುವ ವರದಿ ಪ್ರಕಾರ ಅಲಿಘಡ ವಿಶ್ವವಿದ್ಯಾನಿಲಯ ತಿದ್ದುಪಡಿ ಮಸೂದೆಯ ಪ್ರತಿಭಟನಾ ದಿನ ಉತ್ತರ ಪ್ರದೇಶದಲ್ಲಿ ಶುಕ್ರವಾರ ಆಚರಿಸಿದಾಗ ಹಿಂಸಾಕೃತ್ಯಗಳ ವಿರುದ್ಧ ಪೊಲೀಸ್ ಗೋಳೀಬಾರ್ ನಡೆದು ಓರ್ವ ಸತ್ತು ವಾರಣಾಸಿಯಲ್ಲಿ ಅನೇಕರು ಗಾಯಗೊಂಡರು.

★

ಸಂತಸ ಸುದ್ದಿ

ಗಡಿ ಕಲಹದ ಬಗೆಗೆ ಕೇಂದ್ರ ಸಹಾಯ ಮಂತ್ರಿ ಶ್ರೀ ಕೆ. ಸಿ. ಪಂತರು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಸಂತಸದ ಸುದ್ದಿಯೊಂದನ್ನು ತಿಳಿಸಿದರು. ಈ ವಿಷಯವನ್ನು ಬೆಂಗಳೂರಿನಲ್ಲಿ ಪಂತರು ತಿಳಿಸಿದರು.

★

ಭವಿಷ್ಯ ತಿಳಿಸುವ ಕಂಪ್ಯೂಟರ್

ಜಾತಕಗಳಿಂದ ಮನುಷ್ಯನ ಭವಿಷ್ಯ ತಿಳಿಸುವ ಕಂಪ್ಯೂಟರೊಂದನ್ನು ಪಶ್ಚಿಮ ಜರ್ಮನಿಯ ಎಲೆಕ್ಟ್ರಾನಿಕ್ ಸಂಸ್ಥೆಯೊಂದರಿಂದ ಖರೀದಿಸಲಾಗಿದೆ. ಕಂಪ್ಯೂಟರಿಗೆ ತಿಳಿಸಬೇಕಾದ್ದು ಹೆಸರು, ಲಿಂಗ, ಹುಟ್ಟಿದಿನ ಮತ್ತು ಹೊತ್ತು ಹಾಗೂ ಸ್ಥಳ ಮಾತ್ರ.

★

ಪ್ರತಿಭಟನೆಗೆ ಕರೆ

ವಿಮಾನ ಅಪಹರಣ ವಿರುದ್ಧ ವಿಶ್ವಾದ್ಯಂತ ಕಾರ್ಯಕ್ರಮ ಇಲ್ಲದ್ದನ್ನು ಪ್ರತಿಭಟಿಸಿ ವಿಮಾನ ಚಾಲಕರ ಸಂಘಗಳ ಅಂತರರಾಷ್ಟ್ರೀಯ ಸಂಸ್ಥೆಯ ಅರವತ್ತನಾಲ್ಕು ದೇಶಗಳಲ್ಲಿರುವ ತಮ್ಮ ಸದಸ್ಯರಿಗೆ ಈ ತಿಂಗಳು 29 ನೇ ತಾರೀಖು ಮುಷ್ಕರ ಹೂಡುವಂತೆ ಆಜ್ಞೆ ನೀಡಿರುವದಾಗಿ ನ್ಯೂಯಾರ್ಕಿನಿಂದ ಪಕಟಿಸಿದೆ.

★ ಬೊಂಬಾಯಿ:— ಮಹಾರಾಷ್ಟ್ರದಲ್ಲಿಯ ಕುಖ್ಯಾತ ಜೂಜಿನಲ್ಲಿ ಬಾಜಿ ಹಣದ ಮೇಲೆ ತೆರಿಗೆ ಹೆಚ್ಚಿಸಲಾಗಿದೆ

ಕುಟುಂಬ ಯೋಜನೆ ವಿರುದ್ಧ ಚಳವಳಿ

ಸಿಮ್ಲಾ— ಭಾರತ ಸರಕಾರ ತನ್ನ ಕುಟುಂಬ ಯೋಜನೆಯನ್ನು ಕೈಬಿಡಬೇಕೆಂದು ಹೋದಲ್ಲಿ ಜುಲೈ 1 ರಿಂದ ದೇಶವ್ಯಾಪ್ತಿಯಂತ ಚಳುವಳಿ ಪ್ರಾರಂಭಿಸುವುದಾಗಿ ಅಖಿಲ ಭಾರತೀಯ ಕುಟುಂಬ ಯೋಜನಾ ವಿರೋಧಿ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಶ್ರೀ ಸುಧೀರ ಹೆಂದ್ರೆ ಪತ್ರಿಕೆಯವರಿಗೆ ಇತ್ತೀಚೆಗೆ ತಿಳಿಸಿದರು — ಹಿಂದೂ ಜನಸಂಖ್ಯೆ ಮುಸ್ಲಿಂ ಜನಸಂಖ್ಯೆಗಿಂತ ಕಡಮೆ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂಬುದೇ ಹೆಂದ್ರೆ ಅವರು ಮುಸ್ಲಿಮರು ಕುಟುಂಬ ಯೋಜನೆಯನ್ನು ಪರೋಕ್ಷವಾಗಿ ವಿರೋಧಿಸಿರುವುದೇ ಇದಕ್ಕೆ ಕಾರಣವೆಂದರು.

★

ನಾಯಿಗಳ ಮೇಲೆ ತೆರಿಗೆ

ಶ್ರೀಮಂತ ಸಂಸಾರಗಳು ಸಾಕುತ್ತಿರುವ ಹೆಚ್ಚು ಬೆಲೆಯ ನಾಯಿಗಳ ಮೇಲೆ ಭೋಗ ತೆರಿಗೆ ವಿಧಿಸಲು ದಕ್ಷಿಣ ಕೊರಿಯ ರಾಷ್ಟ್ರೀಯ ತೆರಿಗೆ ಆಡಳಿತಗಾರರು ಯೋಚಿಸುತ್ತಿರುವರು.

●

ಬೆಂಕಿ ಅನಾಹುತ

ಕೊಥಗಂಡಂಗೆ ನಲವತ್ತು ನಾಲ್ಕು ಹೆಂಚಿಲಿಗಳ ದೂಡಿದ ಮೆಟಾಟಿವಾಪುಕವಲ್ಲಿನ 77 ಮನೆಗಳು ದಹನ ಆಹುತಿ ಹಲವಾರು ಹಸುವಿನ ಕೊಟ್ಟಿಗೆ ಹಾಗೂ ಹುಲ್ಲಿನ ರಾಶಿಗಳು ನಾಶವಾದವು.

ವುಡ್‌ಲ್ಯಾಂಡ್ 16-6-72ರಿಂದ ಅಮೋಘ 7 ನೇ ವಾರ

.... ಚಿತ್ರಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಹಂಡಿಬಾಲು
ನಿರ್ದೇಶನ: ರಾಜಶ್ರೀ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೇರಾ 16 6 72 ರಿಂದ

.... ಮನಮೋಹಕ ಹಿಂದಿ ಚಿತ್ರ ....

ರಾಜಾ ನಾ ಬೊ

ಈಸ್ಟ್‌ಮನ್‌ಕಲರ್

ಪಾತ್ರ: ಶಶಿಕಪೂರ್ ನಂದ ರಾಜೇಂದ್ರನಾಥ್ ಆಫ
ದಿಗ್ದರ್ಶನ: ಸೂರಜ್ ಪ್ರಕಾಶ್ ಸಂಗೀತ: ಕಲ್ಯಾಣ್‌ಜಿ ಆನಂದಜಿ
ದಿನ 3 ಆಟಗಳು

ಭೂ ಸುಧಾರಣೆ

ಈ ತಿಂಗಳು 19-ನೇ ತಾ. ಮೈಸೂರು ರಾಜ್ಯ ಶಾಸನ ಸಭೆ ಸಮಾವೇಶವಾಗುವುದು. ಇದು ಆಯವ್ಯಯ ಅಧಿವೇಶನ ಈ ಅಧಿವೇಶನಕ್ಕೆ ಜನತೆ ಹೆಚ್ಚು ಪ್ರಮುಖತೆ ನೀಡಿದೆ. ಕಾರಣ ಅತ್ಯಂತ ವಿವಾದಾಸ್ಪದ ಭೂ ಸುಧಾರಣೆ ತಿದ್ದುಪಡಿ ಮಸೂದಾ ಕಾನೂನು ಈ ಅಧಿವೇಶನದಲ್ಲಿ ಚರ್ಚೆಗೆ ಬರಲಿದೆ

ಭೂ ಸುಧಾರಣೆ ತಿದ್ದುಪಡಿ ಬಗೆಗೆ ರೈತ ಬಾಂಧವರು ಉತ್ಸುಕರಾಗಿಲ್ಲ. **ಮುಂದೇನು ಗತಿ ! ದೇವರೇ ! ಎಂದು ಈಗಾಗಲೇ** ಯೋಚನೆಗೊಳಗಾಗಿದ್ದಾರೆ. ಇನ್ನು ಮುಂದೆ ತಮ್ಮ ಜೀವನ ತುಂಬಾ ತೊಂದರೆಗೀಡಾದೀತೆಂದು ಗಾಭರಿಗೀಡಾಗಿದ್ದಾರೆ.

ರಾಜ್ಯ ಸರ್ಕಾರ 10 ಸ್ಟಾಂಡರ್ಡ್ ಎಕರೆ ಭೂಮಿ ಮಿತಿ ಮಾಡುವುದೆಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ಹೇಳಿದ್ದಾರೆ. ಈ ಮಿತಿ ಬಹಳ ಅನ್ಯಾಯ ಈ ರೀತಿ ನಿಗದಿ ಮಾಡುವುದರಿಂದ ತಮಗೆ ತುಂಬಾ ತೊಂದರೆ ಆಗುವುದೆಂದು ರೈತ ಬಾಂಧವರಿಗೆ ಅನ್ನಿಸಿದೆ. ನಾಲ್ಕೈದು ಮಕ್ಕಳು ದೊಡ್ಡ ಸಂಸಾರವನ್ನುಳ್ಳ ರೈತರು ಈ ವಿಧಿಯ ಭೂಮಿಯನ್ನು ಹೊಂದಿ ಅದರಿಂದ ಆಗುವ ಉತ್ಪಾದನೆಯಿಂದ ಜೀವನ ಮಾಡುವುದು ಹೇಗೆ ? ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಹೇಗೆ ? **ಮಕ್ಕಳಿಗೆ ಮದುವೆ ಮಾಡುವುದು ಹೇಗೆ ? ರೋಗರುಜಿನಗಳಿಗೆ ಔಷಧಿ** ಪೆಚ್ಚ ತರುವುದು ಎಲ್ಲಿಂದ ? – ಹೀಗೆಲ್ಲ **ಯೋಚನೆಗಳನ್ನು ಮಾಡುತ್ತಿದ್ದಾರೆ. ಮಕ್ಕಳಿಗೆ** ಭೂಮಿ ಹಂಚಿಕೊಟ್ಟರೆ ಅವರಿಗೆ ತುಂಬಾ **ಕಡಿಮೆ ಭೂಮಿ ಸಿಗುತ್ತದೆ.** ಆದರ ಪರಿಣಾಮ ತುಂಬಾ ಬಡತನ ಜೀವನ ನಡೆಸಬೇಕಾಗುತ್ತದೆ. **ಕಾಲಕ್ರಮೇಣ ಪೈವ** ಸಾಯ್ತದ ಮೇಲೆ ಅಭಿನಾಸನೇ ಹೋಗಿ ಉತ್ಪಾದನೆ ಕುಂಠಿತವಾಗುವುದು. **ದೇಶದ** ಹಿತದೃಷ್ಟಿಯಿಂದ ಇದು ಪರಿಶೀಲನಾರ್ಹ ವಿಚಾರ.

ಭೂ ಸುಧಾರಣೆ, ನಗರ ಪಟ್ಟಣಗಳ ಆಸ್ತಿ ಮಿತಿ ಹಾಗೂ ಒಬ್ಬರಿಗೆ ಒಂದೇ ಕೆಲಸ ಇವೆಲ್ಲ ಕ್ರಮಗಳು ರಾಷ್ಟ್ರ ಪ್ರಗತಿಗೆ ಹಾನಿಕಾರಕ. ಭೂ ಸುಧಾರಣೆ ತಿದ್ದುಪಡಿಯ ಈಗಿನ ಕ್ರಮದಿಂದ ಪ್ರದೇಶದಲ್ಲಿ ಅಂಶೋಳನ ನಡೆದೀತೆಂಬ ಭೀತಿ ಸಹ ಹ್ಯಕ್ತ ಪಟ್ಟಿದೆ. ಭೂ ಸುಧಾರಣೆ ಕಾನೂನು ತಿದ್ದುಪಡಿಯಿಂದ ಕಮ್ಯೂನಿಸ್ಟರು ಮುಂದೆ ಬರಲು ದಾರಿ ಆದೀತೆಂಬ ಶಂಕೆ ಇದೆ. ವಿವಾದಾಸ್ಪದ ವಿಚಾರಗಳಲ್ಲಿ ವಿವಾದಾಸ್ಪದ ವಿಚಾರವೆಂದೆ ಭೂ ಸುಧಾರಣೆ ತಿದ್ದುಪಡಿ. ಈ ವಿಚಾರದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ತಜ್ಞರು ಎಷ್ಟೇ ಪರಿಶೀಲನೆ, ಸಮಾಲೋಚನೆ, ಚರ್ಚೆ ಮಾಡಿದರೂ ಅಲ್ಪ. ಆದ್ದರಿಂದ ಭೂ ಸುಧಾರಣೆ ತಿದ್ದುಪಡಿಯನ್ನು ಸರ್ಕಾರ ಈ ಅಧಿವೇಶನದಲ್ಲಿ ಪರಿಶೀಲನೆಗೆ ತರದೆ ಮುಂದಕ್ಕೆ ಹಾಕುವುದು ಕ್ಷೇಮಕರ.

ಸಮಾಜವಾದದ ಫಲವೇನೆಂಬುದನ್ನು ತಿಳಿಯಬೇಕಾದರೆ ಸ್ಪೇನ್‌ನತ್ತ ನೋಡಬೇಕು. ಜನತೆಗೆ ಆಶಿಗಳನ್ನಿತ್ತು ಅದನ್ನು ಪಾಲಿಸಲು ಸಾಧ್ಯವಾಗದೇ ಸೋಷಲಿಸ್ಟರು ಸ್ಪೇನ್‌ನನ್ನು ಸರ್ವಾಧಿಕಾರಿತನಕ್ಕೆ ನೀಡಿದುದು ಚರಿತ್ರೆಯ ಪುಟಗಳಲ್ಲಿಯೇ ಸಾಕ್ಷಿ ಆಗಿ ಉಳಿದಿದೆ. ಅಡಳಿತ ಮಾಡುವವರ ಗುರಿ ದೇಶದ ಪ್ರಗತಿಯ ಕಡೆ ವಿಶಾಲವಾಗಿರಬೇಕೆ ವಿನಃ, ಕ್ಷಣಿಕ ಉದ್ದೇಶದ ಸಂಕುಚಿತ ಮನೋಭಾವದ್ದು ಆಗಿರಬಾರದು ನಾಯಕರು ಈ ವಿಚಾರವನ್ನು ತಿಳಿಯಬೇ ಇಲ್ಲ

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು 18 ಸ್ಟಾಂಡರ್ಡ್ ಎಕರೆ (24 ಎಕರೆ 9 ಗುಂಟೆ) ಭೂಮಿ ಇರಬೇಕೆಂದು ಈ ತಿಂಗಳು 10 ನೇ ತಾ ತಿಳಿಸಿದ್ದಾರೆ. **6 ಜನರಿಗೆ ಹೆಚ್ಚು ಇದ್ದರೆ ಇನ್ನೂ 10 ಎಕರೆ ಹೆಚ್ಚು ಇರಬೇಕು ! ಉಳಿದ ಭೂಮಿ 70 ಎಕರೆ ಇರಬೇಕು** ಈ ಭೂಮಿಯನ್ನು ಸ್ವಂತ ವ್ಯವಸಾಯ **ಮಾಡುವುದಕ್ಕೆ** ಇಲ್ಲವೇ ಗುತ್ತಿಗೆ ಕೊಡುವುದಕ್ಕೆ ಅವಕಾಶ ಇರಬೇಕು. ಇದಕ್ಕೆ ಮೀರಿದ ಭೂಮಿಯನ್ನು ಪೇಟಿಧಾರಣೆ ಇತ್ತು ಸರ್ಕಾರ ಪಡೆಯಬೇಕು

ಭೂ ಹಿಡುವಳಿದಾರರಿಂದ ಭೂಮಿ ತೆಗೆದುಕೊಳ್ಳುವಾಗಲೇ ಅವರಿಗೆ **ತುಂಬಾ** ದುಃಖವಾಗುವುದು ಅವರಿಗೆ ಪೇಟಿಧಾರಣೆಯನ್ನಾದರೂ ಕೊಡಬೇಕು **ಪಶ್ಚಿಮ** ವಿಯೆಟ್ನಾಂನಲ್ಲಿ ಭೂ ಸುಧಾರಣೆ ಇತ್ತೀಚೆಗೆ ಬಂದಿದೆ. **ವಶಮಾಡಿಕೊಂಡ ಭೂಮಿಗೆ** ಶೇಕಡ 20 ನಗದು 80 ಬಾಂಡು ಕೊಡುವ ಉದ್ದೇಶವನ್ನು ಸರ್ಕಾರ ಹೊಂದಿದೆ ಶೇಕಡ 10 ಬಡ್ಡಿ ದರ ನಿಗದಿ ಆಗಿದೆ. ಮೈಸೂರು ರಾಜ್ಯದಲ್ಲಿ **ಶೇಕಡ 4 ವರೆ** ಬಡ್ಡಿ ನಿಗದಿ ಆಗಿದೆ. ಈ ವಿಚಾರವನ್ನು ಸರ್ಕಾರ ಪರಿಶೀಲಿಸಬೇಕು.

Contribute Liberally
to the National Defence Fund

Edited Printed and Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆನೆ - ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....